

ಸೋತರೆ, ಮುಂದಿನ ಪಂದ್ಯಕ್ಕೆ ಮತ್ತೆ ಐದು ಐದು ಪೈಸೆ ಕೊಡಲು ಕೈ ಎತ್ತಬೇಕಾಗುತ್ತಿತ್ತು.

ಮಂಜನ ತಂಡ ಸಾಕಷ್ಟು ಬಲಿಷ್ಠವಾದ ತಂಡವಾದ್ದರಿಂದ ಸಾಮಾನ್ಯವಾಗಿ ಪಂದ್ಯದಲ್ಲಿ ಅವರೇ ಗೆಲ್ಲುತ್ತಿದ್ದರು. ಅಲ್ಲದೆ ಸೋತ ತಂಡದವರು ಇವರನ್ನು ಒಮ್ಮೆಯಾದರೂ ಸೋಲಿಸಬೇಕು ಎಂದು ಜಿದ್ದಿನಿಂದ ಮತ್ತೆ ಅವರಿಗೆ ಪಂಥಾಹ್ವಾನ ಕೊಟ್ಟು ಸೋಲುತ್ತಿದ್ದರು; ಜಿದ್ದು ಹೆಚ್ಚಾಗಿ ಮತ್ತೆ ಪಂದ್ಯವನ್ನು ಆಡಲು ಬರುತ್ತಿದ್ದರು!

ಇಂಥ ಸಂದರ್ಭಗಳಲ್ಲಿ ಊಹಿಸಲು ಅಸಾಧ್ಯವಾದ ಘಟನೆಗಳು ನಡೆಯುತ್ತಿದ್ದವು. ಒಮ್ಮೊಮ್ಮೆ ಸೋತ ತಂಡದವರು ಇವರ ಬಳಿ ಬಂದು 'ಬೇರೆ ತಂಡದ ಮೇಲೆ ಪಂದ್ಯ ಇದೆ. ನಿಮ್ಮಲ್ಲಿ ಇಬ್ಬರು ನಮ್ಮ ತಂಡಕ್ಕೆ ಬಂದು ಆಡುತ್ತೀರಾ?' ಎಂದು ಕೇಳುತ್ತಿದ್ದರು. 'ಗೆದ್ದರೆ ನೋಟ್‌ಪುಸ್ತಕ, ಪೆನ್ಸಿಲ್ ನಮಗೆ' ಎಂಬ ಇವರ ಷರತ್ತಿಗೆ ಅವರು ಒಪ್ಪುತ್ತಿದ್ದರು. ಇಂಥ ಆಟವನ್ನು ನೋಡಿ ತಮ್ಮ ತಂಡದವರಿಗೆ ಉತ್ತೇಜನ ಕೊಡಲು ಇತರ ಸದಸ್ಯರು ಹೋಗುತ್ತಿದ್ದರು. ಒಮ್ಮೆ ಹೀಗೆ ಆಡಲು ಹೋದಾಗ, ಆ ತಂಡದ ನಾಯಕನ ತಂದೆಯವರದ್ದೇ ಒಂದು ಹೋಟೆಲ್ ಇತ್ತು. ಅವರು ಮಂಜನ ತಂಡದ ಎಲ್ಲರಿಗೂ ಹೋಟೆಲಿನಲ್ಲಿ ಎರಡೆರಡು ಇಡ್ಲಿ, ವಡೆ ನೀಡಿದ್ದರು. ಪಂದ್ಯವನ್ನು ಗೆದ್ದ ಮೇಲೆ ಖುಷಿಗೆ ಬೈಟೂ ಕೇಸರಿಬಾತ್ ಕೂಡ ನೀಡಿದ್ದರು.

ಒಮ್ಮೆ ಇನ್ನೊಂದು ವಿಚಿತ್ರ ಘಟನೆಯು ಸಂಭವಿಸಿತ್ತು. ಪಂದ್ಯವನ್ನು ಸೋತ ಮೇಲೆ ಮಂಜನ ತಂಡಕ್ಕೆ ಟ್ರೋಫಿಯನ್ನು ಕೊಡುವ ಸಮಯದಲ್ಲಿ ಎದುರಾಳಿ ತಂಡದ ನೋಟ್‌ಪುಸ್ತಕ ಹಾಗೂ ಪೆನ್ಸಿಲ್‌ಗಳನ್ನು ಇಬ್ಬರು ಹುಡುಗರು ಬಾಚಿಕೊಂಡು ಓಡಿಹೋಗಿದ್ದರು. ಸೋತ ತಂಡದ ನಾಯಕ 'ಅಯ್ಯೋ ಯಾರೋ ಕದ್ದುಕೊಂಡು ಓಡಿ ಹೋದರು. ನಾನು ಏನು ಮಾಡಲಿ?' ಎಂದು ಪೆಚ್ಚುಮೋರೆ ಹಾಕಿಕೊಂಡ.

'ಅದೆಲ್ಲಾ ಗೊತ್ತಿಲ್ಲ. ಅಂಗಡಿಗೆ ನಡಿ. ಹೊಸದು ಕೊಂಡುಕೊಂಡು ಕೊಡು' ಎಂದು ಮಂಜನ ಕಡೆಯವರು ಅವನಿಗೆ ಧಮಕಿ ಹಾಕಲು ಪ್ರಾರಂಭಿಸಿದ್ದರು.

ಅವನು ಇನ್ನೂ ಕಿಲಾಡಿ. 'ಹಾಗೆ ತೆಗೆದುಕೊಂಡು ಹೋದವರು ನಿಮ್ಮ ಕಡೆಯವರೇ ಇರಬೇಕು' ಎಂಬ ವರಸೆಯನ್ನು ಪ್ರಾರಂಭಿಸಿದ್ದ. 'ಯಾರ ಕಡೆಯ ಹುಡುಗರು?' ಎಂಬ ವಾದವಿವಾದ ಆರಂಭವಾಯಿತು. ಅವರ ಕಡೆ ಆಟ ನೋಡಲು ಬಂದು ನಗುತ್ತಾ ನಿಂತಿದ್ದ ಒಬ್ಬ ಹುಡುಗನಿಗೆ, ಮಂಜನ ಕಡೆಯವನು 'ಯಾರೋ ಅವನು?' ಎಂದು ಮೆಲ್ಲಗೆ ಕೇಳಿದ. ಆ ಹುಡುಗ ಸೋತ ತಂಡದ ನಾಯಕನತ್ತ ಬೆರಳು ಮಾಡಿ 'ಅವನ ತಮ್ಮ' ಎಂದು ಹೇಳಿದ.

ತಮ್ಮನ ಗುಟ್ಟು ರಟ್ಟಾದ ಮೇಲೆ ಅವನು 'ನಾಳೆ ಇಲ್ಲೇ ತಂದುಕೊಡುತ್ತೇನೆ' ಎಂದು ಭಾಷೆ ಕೊಟ್ಟು, ಬೇಡಿಕೊಂಡು, ಬೀಸುವ ದೊಣ್ಣೆಯಿಂದ ತಪ್ಪಿಸಿಕೊಂಡ. ಅವನು ಪುಣ್ಯಕೋಟಿ ಎಂಬ ಗೋವಿನ ಕಥೆಯನ್ನು ಓದಿದ್ದನೋ ಇಲ್ಲವೋ ಗೊತ್ತಿಲ್ಲ. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ನಡೆಯುವಂತೆ ಮಾರನೆಯ ದಿನ ಅವನು ಅಲ್ಲಿಗೆ ಬರಲೇ ಇಲ್ಲ. ಮಂಜನ ತಂಡದಲ್ಲಿದ್ದ ಕೆಲವರಿಗೆ ಆ ತಂಡದಲ್ಲಿದ್ದವರು ದೂರದ ನೆಂಟರು. ಹಾಗಾಗಿ ಎದುರಾಳಿ ತಂಡದ ನಾಯಕನ ಮನೆಯನ್ನು ಪತ್ತೆ ಮಾಡುವುದು ಕಷ್ಟವಾಗಲಿಲ್ಲ. ಮಂಜ ಹಾಗೂ ಆತನ ಸ್ನೇಹಿತರು ಬ್ಯಾಟುಗಳನ್ನು, ವಿಕೆಟ್ಟುಗಳನ್ನು ಹಿಡಿದುಕೊಂಡು ಅವನ ಮನೆಗೆ ಮುತ್ತಿಗೆ ಹಾಕಿದರು. ಇವರನ್ನು ನೋಡಿ ಬೆದರಿದ ಅವನು ತನ್ನ ತಂದೆಯನ್ನು ಕರೆದುಕೊಂಡು ಬಂದ.